# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಅಮರನಾಥ ಧೂಳೆ, ಅಂದಿನ ಸಹಾಯಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗ, ಅಫಜಲಪೂರ ಹಾಗೂ ಶ್ರೀ ಖಾಜಾನಿಜಾಮೋದ್ದೀನ್, ಕಿರಿಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗ, ಅಫಜಲಪೂರ ಇವರುಗಳನ್ನು ಸೇವೆಯಿಂದ ಅಮಾನತ್ತುಪಡಿಸುವ ಬಗ್ಗೆ - ಆದೇಶ.

ಓದಲಾಗಿದೆ:-

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕಲಬುರಗಿ ಇವರ ಪತ್ರ ಸಂಖ್ಯೆ ಜಿಪಕ/ಆಡಳಿತ/ವಿಚಾರಣೆ/47/ 2015-16 ದಿನಾಂಕ 14-10-2015.
2. ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 103 ಇಎನ್‌ಕ್ಯೂ 2015 ದಿನಾಂಕ 23.02.2016.
3. ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 103 ಇಎನ್‌ಕ್ಯೂ 2015 ದಿನಾಂಕ 18.03.2016.
4. ಸರ್ಕಾರದ ಆದೇಶ ಸಂಖ್ಯೆ ಗ್ರಾಅಪ 103 ಇಎನ್‌ಕ್ಯೂ 2015 ದಿನಾಂಕ 12.04.2016.
5. ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಗುಣನಿಯಂತ್ರಣ ವಿಭಾಗ, ಕಲಬುರಗಿ ಇವರ ತನಿಖಾ ವರದಿ ದಿನಾಂಕ 19.12.2016.

*****

ಪ್ರಸ್ತಾವನೆ:

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕಲಬುರಗಿ ಇವರು ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಪತ್ರದ ಜೊತೆ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕಲಬುರಗಿ ಇವರ ಪರಿವೀಕ್ಷಣಾ ವರದಿ ಹಾಗೂ ಇತರೆ ದಾಖಲೆಗಳನ್ನು ಸರ್ಕಾರಕ್ಕೆ ಸಲ್ಲಿಸಿ ಪರಿವೀಕ್ಷಣಾ ವರದಿಯ ಅನುಸಾರ ಎನ್.ಆರ್.ಡಿ.ಡಬ್ಲ್ಯು.ಪಿ. ಯೋಜನೆಯಡಿ ಮಂಜೂರಾದ ಅಫಜಲಪೂರ ತಾಲ್ಲೂಕಿನ ಭೈರಾಮಡಗಿ ತಾಂಡಾದ ಹೊಸ ತೆರೆದ ಬಾವಿಗೆ **Steining Wall** ಅನ್ನು ನಿರ್ಮಾಣ ಮಾಡದಿದ್ದರೂ ಸಹ, ನಿರ್ಮಾಣ ಮಾಡಿರುವ ಹಾಗೆ ಅಳತೆ ಪುಸ್ತಕದಲ್ಲಿ ದಾಖಲೆಗಳನ್ನು ನಮೂದಿಸಿ ಬಿಲ್ಲು ಪಾಸು ಮಾಡಿರುವುದು, ಸ್ಥಳಪರಿಶೀಲನಾ ಸಂದರ್ಭದಲ್ಲಿ ಕೇವಲ 6 ಮೀಟರ್ ಆಳವಿರುವ ತೆರೆದ ಬಾವಿಯ ಬಗ್ಗೆ ಅಳತೆ ಪುಸ್ತಕದಲ್ಲಿ 12 ಮೀಟರ್ ಅಳತೆ ನಮೂದಿಸಿ ಸರ್ಕಾರದ ಹಣವನ್ನು ದುರುಪಯೋಗಪಡಿಸಿಕೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದು ಇದಕ್ಕೆ ಶ್ರೀ ಅಮರನಾಥ, ಧೂಳೆ, ಕಿರಿಯ ಇಂಜಿನಿಯರ್ ಹಾಗೂ ಶ್ರೀ ಮಹಾದೇವ ಶಿಂಧೆ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರುಗಳು ಕಾರಣರಾಗಿದ್ದು ಈಗಾಗಲೇ ಶ್ರೀ ಅಮರನಾಥ ಧೂಳೆ, ಕಿರಿಯ ಇಂಜಿನಿಯರ್ ಇವರನ್ನು ದಿನಾಂಕ 14-10-2015ರಂದು ಸೇವೆಯಿಂದ ಅಮಾನತ್ತುಪಡಿಸಲಾಗಿದೆ ಎಂದೂ, ಶ್ರೀ ಮಹಾದೇವ ಶಿಂಧೆ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗ, ಅಫಜಲಪುರ ಇವರನ್ನು ಕೂಡಲೇ ಸೇವೆಯಿಂದ ಅಮಾನತ್ತುಪಡಿಸುವಂತೆ ಹಾಗೂ ಸದರಿ ಅಧಿಕಾರಿಯ

ಮೇಲುಸ್ತುವಾರಿಯಲ್ಲಿ ಆಗುತ್ತಿರುವ ಎಲ್ಲಾ ಎನ್.ಆರ್.ಡಿ.ಡಬ್ಲ್ಯೂ.ಪಿ. ಕಾಮಗಾರಿಗಳ ತಪಾಸಣೆಯನ್ನು ರಾಜ್ಯ ಮಟ್ಟದ ತಂಡದಿಂದ ಮಾಡಬೇಕೆಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರವರು ಕೋರಿದ್ದರು.

ಸರ್ಕಾರವು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕಲಬುರಗಿ ರವರ ಪ್ರಸ್ತಾವನೆಯನ್ನು ಪರಿಶೀಲಿಸಿ ಶ್ರೀ ಮಹಾದೇವ ಶಿಂಧೆ,, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗ, ಅಫಜಲಪುರ ಇವರು ಸದರಿ ಪ್ರಕರಣದಲ್ಲಿ ಸರ್ಕಾರದ ಹಣವನ್ನು ದುರುಪಯೋಗಪಡಿಸಿಕೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದ ಕಾರಣ ಸದರಿಯವರ ವಿರುದ್ಧದ ಆರೋಪಗಳ ಬಗ್ಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ಅನುಸಾರ ಶಿಸ್ತು ಕ್ರಮ ಕೈಗೊಳ್ಳುವುದನ್ನು ಬಾಕಿಯಿಟ್ಟು, ಸದರಿಯವರನ್ನು ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ದಿನಾಂಕ 23.02.2016ರ ಆದೇಶದಲ್ಲಿ ಸದರಿಯವರನ್ನು ಸೇವೆಯಿಂದ ಅಮಾನತ್ತುಪಡಿಸಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ದಿನಾಂಕ 18.03.2016ರ ಆದೇಶದಲ್ಲಿ ಶ್ರೀ ಮಹಾದೇವ ಶಿಂಧೆ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗ, ಅಫಜಲಪುರ ಇವರ ಮೇಲುಸ್ತುವಾರಿಯಲ್ಲಿ ಆಗಿರುವ ಎಲ್ಲಾ ಎನ್.ಆರ್.ಡಿ.ಡಬ್ಲ್ಯೂ.ಪಿ. ಕಾಮಗಾರಿಗಳ ತಪಾಸಣೆಯನ್ನು ನಡೆಸಿ ಒಂದು ತಿಂಗಳೊಳಗಾಗಿ ತಪಾಸಣಾ ವರದಿ ಸಲ್ಲಿಸಲು ಕಾರ್ಯಪಾಲಕ ಇಂಜಿನಿಯರ್, ಗುಣನಿಯಂತ್ರಣ ವಿಭಾಗ, ಕಲಬುರಗಿ ಇವರನ್ನು ನೇಮಿಸಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (4)ರಲ್ಲಿ ಓದಲಾದ ದಿನಾಂಕ 12.04.2016ರ ಆದೇಶದಲ್ಲಿ ಶ್ರೀ ಮಹಾದೇವ ಶಿಂಧೆ, ಸಹಾಯಕ ಕಾರ್ಯಪಾಲಕ ಇಂಜಿನೀಯರ್ ಇವರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ಕಾರ್ಯಪಾಲಕ ಇಂಜಿನಿಯರ್, ಗುಣ ನಿಯಂತ್ರಣ ವಿಭಾಗ, ಕಲಬುರಗಿ ಇವರು ಸಲ್ಲಿಸುವ ತನಿಖಾ ವರದಿಯಲ್ಲಿನ ಅಂಶಗಳ ಬಗ್ಗೆ ಶಿಸ್ತು ಕ್ರಮ ಕೈಗೊಳ್ಳುವುದನ್ನು ಬಾಕಿಯಿಟ್ಟು, ಸದರಿಯವರ ಅಮಾನತ್ತನ್ನು ತೆರವುಗೊಳಿಸಿ ಸೇವೆಯಲ್ಲಿ ಮನರ್ ಸ್ಥಾಪಿಸಿ, ಅವರ ಸೇವೆಯನ್ನು ಮಾತೃ ಇಲಾಖೆಯಾದ ಲೋಕೋಪಯೋಗಿ ಇಲಾಖೆಗೆ ಹಿಂದಿರುಗಿಸಲಾಗಿದೆ.

ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಗುಣ ನಿಯಂತ್ರಣ ವಿಭಾಗ, ಕಲಬುರಗಿ ಇವರು ಶ್ರೀ ಮಹಾದೇವ ಶಿಂಧೆ, ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಅಫಜಲಪೂರ ಇವರು 2014-15ನೇ ಸಾಲಿನಲ್ಲಿ ಕಾರ್ಯನಿರ್ವಹಿಸಿದ ಅವಧಿಯಲ್ಲಿ ಕೈಗೊಂಡಿರುವ ಕುಡಿಯುವ ನೀರು ಸರಬರಾಜು ಕಾಮಗಾರಿಗಳ ತಪಾಸಣೆ ನಡೆಸಿ ಮೇಲೆ ಕ್ರಮ ಸಂಖ್ಯೆ (5)ರಲ್ಲಿ ಓದಲಾದ ದಿನಾಂಕ 19.12.2016ರಂದು ಸಲ್ಲಿಸಿರುವ ತನಿಖಾ ವರದಿಯಲ್ಲಿ ಶ್ರೀ ಮಹಾದೇವ ಶಿಂಧೆ, ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗ, ಅಫಜಲಪೂರ ಇವರು ಗ್ರಾಮೀಣ ಕುಡಿಯುವ ನೀರು ಕಾಮಗಾರಿಗಳ ಕೆಲಸಗಳನ್ನು ಮಂಜೂರಾದ ಅಂದಾಜು ಪಟ್ಟಿಯಂತೆ ಪೂರ್ಣಗೊಳಿಸದೇ ಇವರು ಈ ಕೆಳಕಂಡವರ ಜೊತೆಗೂಡಿ ರೂ. 129.79ಲಕ್ಷಗಳನ್ನು ಅವ್ಯವಹಾರ ಮಾಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆಂದು ವರದಿ ಸಲ್ಲಿಸಿರುತ್ತಾರೆ:-

1. ಶ್ರೀ ಖಾಜಾನಿಜಾಮೋದ್ದೀನ್, ಕಿರಿಯ ಇಂಜಿನಿಯರ್
2. ಶ್ರೀ ಅಮರನಾಥ ಧೂಳೆ, ಅಂದಿನ ಸಹಾಯಕ ಇಂಜಿನಿಯರ್
3. ಶ್ರೀ ಸಿದ್ರಾಮ ಪಾಟೀಲ್, ಗುತ್ತಿಗೆದಾರರು
4. ಶ್ರೀ ದೇವಿಂದ್ರಪ್ಪ ಜಮಾದಾರ, ಗುತ್ತಿಗೆದಾರರು

5. ಶ್ರೀ ಶಿವಪ್ಪ ಡಿ. ಗಾಳನೂರು, ಗುತ್ತಿಗೆದಾರರು
6. ಶ್ರೀ ಮಹಾಂತಗೌಡ ಪಾಟೀಲ್, ಗುತ್ತಿಗೆದಾರರು
7. ಶ್ರೀ ಅಭಿಷೇಕ ಅರುಣಕುಮಾರ್ ಪಾಟೀಲ್, ಗುತ್ತಿಗೆದಾರರು
8. ಶ್ರೀ ಅಂಬರೇಶ ಎಂ. ಪಾಟೀಲ್, ಗುತ್ತಿಗೆದಾರರು
9. ಶ್ರೀ ನೂರಅಹ್ಮದ್ ಭಗವಾನ್, ಗುತ್ತಿಗೆದಾರರು
10. ಶ್ರೀ ಗುರುಶಾಂತ ಎಂ. ಸಾಲಿಮಠ, ಗುತ್ತಿಗೆದಾರರು

ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಗುಣ ನಿಯಂತ್ರಣ ವಿಭಾಗ, ಕಲಬುರಗಿ ಇವರ ತಪಾಸಣಾ ವರದಿಯಲ್ಲಿ ನಿರ್ವಹಿಸಲಾದ ಕಾಮಗಾರಿಗಳಿಂದ ಸರ್ಕಾರಕ್ಕೆ ಉಂಟಾದ ನಷ್ಟದ ವಿವರ ಈ ಕೆಳಕಂಡಂತಿರುವುದಾಗಿ ತಿಳಿಸಿದ್ದಾರೆ:-

| ಕ್ರ.ಸಂ. | ಕಾಮಗಾರಿಯ ಹೆಸರು | ದುರುಪಯೋಗವಾದ ಮೊತ್ತ ರೂ. ಲಕ್ಷಗಳಲ್ಲಿ |
|---|---|---|
| 1 | ಹಾವುನೂರ ತಾಂಡಾದಲ್ಲಿ ನಲ್ಲಿ ನೀರು ಸರಬರಾಜು ಕಾಮಗಾರಿ. | 1.45/- |
| 2 | ಚೌಡಪೂರ ಸಣ್ಣ ತಾಂಡಾದಲ್ಲಿ ನಲ್ಲಿ ನೀರು ಸರಬರಾಜು ಕಾಮಗಾರಿ. | 4.37/- |
| 3 | ಗಣಗಾಪೂರ ಗ್ರಾಮದಲ್ಲಿ ನಲ್ಲಿ ನೀರು ಸರಬರಾಜು ಕಾಮಗಾರಿ. | 1.94/- |
| 4 | ತೆಗ್ಗಳ್ಳಿ ಗ್ರಾಮದಲ್ಲಿ ನಲ್ಲಿ ನೀರು ಸರಬರಾಜು ಕಾಮಗಾರಿ. | 7.377/- |
| 5 | ಹೂವಿನಹಳ್ಳಿ ಗ್ರಾಮದಲ್ಲಿ ನಲ್ಲಿ ನೀರು ಸರಬರಾಜು ಕಾಮಗಾರಿ. | 15.694/- |
| 6 | ಬಂದರವಾಡಾ ಗ್ರಾಮದಲ್ಲಿ ನಲ್ಲಿ ನೀರು ಸರಬರಾಜು ಕಾಮಗಾರಿ. | 16.51/- |
| 7 | ಘತ್ತರಗಾ ಗ್ರಾಮದಲ್ಲಿ ನಲ್ಲಿ ನೀರು ಸರಬರಾಜು ಕಾಮಗಾರಿ. | 4.028/- |
| 8 | ಹಿಂಚಗೇರಾ ಗ್ರಾಮದಲ್ಲಿ ನಲ್ಲಿ ನೀರು ಸರಬರಾಜು ಕಾಮಗಾರಿ. | 6.3109/- |
| 9 | ದಿಕ್ಸಂಗಾ (ಕೆ) ಗ್ರಾಮದಲ್ಲಿ ನಲ್ಲಿ ನೀರು ಸರಬರಾಜು ಕಾಮಗಾರಿ. | 3.52/- |
| 10 | ಅಳಗಿ (ಕೆ) ಗ್ರಾಮದಲ್ಲಿ ನಲ್ಲಿ ನೀರು ಸರಬರಾಜು ಕಾಮಗಾರಿ. | 3.0639/- |
| 11 | ಆನೂರ ಗ್ರಾಮದಲ್ಲಿ ನಲ್ಲಿ ನೀರು ಸರಬರಾಜು ಕಾಮಗಾರಿ. | 3.30/- |
| 12 | ಗೂಡೂರ ತಾಂಡಾದಲ್ಲಿ ನಲ್ಲಿ ನೀರು ಸರಬರಾಜು ಕಾಮಗಾರಿ. | 11.24/- |
| 13 | ಬೈರಾಮಡಗಿ ತಾಂಡಾ(ಹರಿಜನವಾಡ)ದಲ್ಲಿ ನಲ್ಲಿ ನೀರು ಸರಬರಾಜು ಕಾಮಗಾರಿ. | 4.821/- |
| 14 | ಗೌಡಗಾಂವ್ ಗ್ರಾಮದಲ್ಲಿ ನಲ್ಲಿ ನೀರು ಸರಬರಾಜು ಕಾಮಗಾರಿ. | 6.989/- |
| 15 | ಹೀರಾನಾಯಕ ತಾಂಡಾದಲ್ಲಿ ಕಿರು ನೀರು ಸರಬರಾಜು ಕಾಮಗಾರಿ. | 3.76/- |
| 16 | ಪಾಲಸಿಂಗ್ ತಾಂಡಾದಲ್ಲಿ ಕಿರು ನೀರು ಸರಬರಾಜು ಕಾಮಗಾರಿ. | 3.509/- |
| 17 | ಕಿರುಸಾವಳಗಿ ಕಿರು ನೀರು ಸರಬರಾಜು ಕಾಮಗಾರಿ. | 4.645/- |
| 18 | ಗೋಬ್ಬುರ (ಬಿ) ಹರಿಜನವಾಡಾ ಕಿರು ನೀರು ಸರಬರಾಜು ಕಾಮಗಾರಿ. | 4.37/- |
| 19 | ಶಿವನಗರ ತಾಂಡಾದಲ್ಲಿ ಕಿರು ನೀರು ಸರಬರಾಜು ಕಾಮಗಾರಿ. | 1.753/- |
| 20 | ಚೌಡಪೂರ ತಾಂಡಾದಲ್ಲಿ ಕಿರು ನೀರು ಸರಬರಾಜು ಕಾಮಗಾರಿ. | 1.780/- |
| 21 | ಗೋಬ್ಬುರವಾಡಿ ಗ್ರಾಮದಲ್ಲಿ ಕಿರು ನಲ್ಲಿ ನೀರು ಸರಬರಾಜು ಕಾಮಗಾರಿ. | 3.028/- |
| 22 | ರೇವೂರ (ಬಿ) ತಾಂಡಾದಲ್ಲಿ ನಲ್ಲಿ ನೀರು ಸರಬರಾಜು ಕಾಮಗಾರಿ. | 2.54/- |
| 23 | ಬಡದಾಳ ತಾಂಡಾದಲ್ಲಿ ಕಿರು ನೀರು ಸರಬರಾಜು ಕಾಮಗಾರಿ. | 3.38/- |
| 24 | ಕರ್ಜಗಿ ತಾಂಡಾದಲ್ಲಿ ಕಿರು ನೀರು ಸರಬರಾಜು ಕಾಮಗಾರಿ. | 4.825/- |
| 25 | ಶಿರವಾಳ ಗ್ರಾಮದಲ್ಲಿ ಕಿರು ನೀರು ಸರಬರಾಜು ಕಾಮಗಾರಿ. | 3.598/- |
| 26 | ರೇವೂರ (ಕೆ) ಗ್ರಾಮದಲ್ಲಿ ನಲ್ಲಿ ನೀರು ಸರಬರಾಜು ಕಾಮಗಾರಿ. | 2.00/- |
| | ಒಟ್ಟು | 129.8018 |

ಅಲ್ಲದೇ 2014-15ನೇ ಸಾಲಿನ ಅಫಜಲಪೂರ ತಾಲ್ಲೂಕಿಗೆ ಶಾಲೆ ಮತ್ತು ಅಂಗನವಾಡಿ, ಚೆಕ್ ಡ್ಯಾಂ, ನಲ್ಲಿ ನೀರು, ಕಿರು ನೀರು, ಬಹುಗ್ರಾಮ ಯೋಜನೆ ಮುಂತಾದ ಒಟ್ಟು 113 ಕಾಮಗಾರಿಗಳ ಕ್ರಿಯಾ ಯೋಜನೆ ಅನುಮೋದನೆಯಾಗಿರುತ್ತದೆಂದು ಇವುಗಳಲ್ಲಿ ಶಾಲಾ ಮತ್ತು ಅಂಗನವಾಡಿ ಕುಡಿಯುವ ನೀರು ಕಾಮಗಾರಿಗಳು ಭೌತಿಕವಾಗಿ ಪೂರ್ಣಗೊಂಡಿದ್ದರೂ ಸಹ ಇವುಗಳಲ್ಲಿ ನೀರು ಸರಬರಾಜು ಆಗದೇ ಇರುವುದು ಕಂಡುಬಂದಿದೆಯಂದೂ ಹಾಗೂ ಸೋನ್ನ, ಕರಜಗಿ, ಮತ್ತು ಅವರಹಳ್ಳಿ ಚೆಕ್ ಡ್ಯಾಮ ಕಾಮಗಾರಿಗಳನ್ನು ನಿಗದಿತ ಸ್ಥಳದಲ್ಲಿ ಅನುಷ್ಠಾನಗೊಳಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ.

ಸರ್ಕಾರವು ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಗುಣ ನಿಯಂತ್ರಣ ವಿಭಾಗ, ಕಲಬುರಗಿ ಇವರು ಸಲ್ಲಿಸಿರುವ ವರದಿಯನ್ನು ಪರಿಶೀಲಿಸಲಾಗಿ ಶ್ರೀ ಮಹಾದೇವ ಶಿಂಧೆ, ಹಿಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗ, ಅಫಜಲಪೂರ ಇವರು 2014-15ನೇ ಸಾಲಿನಲ್ಲಿ ಕೈಗೊಂಡಿರುವ ಕಾಮಗಾರಿಗಳ ಪೈಕಿ ಶಾಲಾ ಮತ್ತು ಅಂಗನವಾಡಿ ಕುಡಿಯುವ ನೀರು ಕಾಮಗಾರಿಗಳನ್ನು ಭೌತಿಕವಾಗಿ ಪೂರ್ಣಗೊಳಿಸಿದ್ದರೂ ಸಹ ನೀರು ಸರಬರಾಜು ಆಗದೇ ಇರುವುದು, ಪ್ರತಿ ಕಾಮಗಾರಿಗೆ ಅಂದಾಜು ಮೊತ್ತ ರೂ.5.00 ಲಕ್ಷಗಳ ಮೂರು ಚೆಕ್ ಡ್ಯಾಮ್ ಕಾಮಗಾರಿಗಳನ್ನು ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆಯದೇ ಬೇರೆ ಸ್ಥಳಗಳಲ್ಲಿ ನಿರ್ಮಿಸಿರುವುದು, 26 ಕುಡಿಯುವ ನೀರು ಸರಬರಾಜು ಕಾಮಗಾರಿಗಳನ್ನು ಅಂದಾಜು ಪಟ್ಟಿಯಂತೆ ಅನುಷ್ಠಾನಗೊಳಿಸದೇ ಅಪೂರ್ಣ ಕಾಮಗಾರಿ ಕೈಗೊಂಡು ಕಾಮಗಾರಿಯ ಗುತ್ತಿಗೆದಾರರೊಂದಿಗೆ ಉಪವಿಭಾಗದ ಸಹಾಯಕ ಇಂಜಿನಿಯರ್ ಹಾಗೂ ಕಿರಿಯ ಇಂಜಿನಿಯರ್ ಇವರು ಜೊತೆಗೂಡಿ ಸರ್ಕಾರದ ಹಣ ಸುಮಾರು ರೂ. 129.80 ಲಕ್ಷಗಳು ದುರುಪಯೋಗಪಡಿಸಿಕೊಂಡಿರುವುದು ದಾಖಲೆಗಳಿಂದ ಕಂಡುಬಂದಿರುತ್ತದೆ. ಹಾಗಾಗಿ ಸದರಿಯವರುಗಳು ಸರ್ಕಾರಿ ನೌಕರರಾಗಿ ತಮ್ಮ ಕೆಲಸದಲ್ಲಿ ಪೂರ್ಣ ಪ್ರಮಾಣದ ಪ್ರಾಮಾಣಿಕತೆ ಹಾಗೂ ಸಂಪೂರ್ಣ ನಿಷ್ಠೆ ತೋರದೆ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ವರ್ತಿಸಿ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ ನಿಯಮ 3(1)ನ್ನು ಉಲ್ಲಂಘಿಸಿ ತೀವ್ರತರವಾದ ದುರ್ನಡತೆ ಎಸಗಿ ಸರ್ಕಾರಕ್ಕೆ ಬೃಹತ್ ಪ್ರಮಾಣದ ಆರ್ಥಿಕ ನಷ್ಟ ಉಂಟಾಗಲು ಜವಾಬ್ದಾರರಾಗಿರುವುದರಿಂದ ಮೇಲ್ಕಂಡ ಆಪಾದಿತರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವುದನ್ನು ಬಾಕಿಯಿಟ್ಟು ಸೇವೆಯಿಂದ ಅಮಾನತ್ತುಡಿಸಲು ಸರ್ಕಾರವು ತೀರ್ಮಾನಿಸಿದೆ. ಅಂದರಂತೆ ಈ ಕೆಳಕಂಡ ಆದೇಶ.

**ಆದೇಶ ಸಂಖ್ಯೆ: ಗ್ರಾಅಪ 103 ಇಎನ್‌ಕ್ಯೂ 2015, ಬೆಂಗಳೂರು, ದಿನಾಂಕ 08.03.2017**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರವು ಈ ಕೆಳಕಂಡ ಅಧಿಕಾರಿ / ನೌಕರರು ತಮ್ಮ ಕರ್ತವ್ಯದಲ್ಲಿ ಪೂರ್ಣ ಪ್ರಮಾಣದ ನಿಷ್ಠೆ ಮತ್ತು ಪ್ರಾಮಾಣಿಕತೆ ತೋರಲು ವಿಫಲರಾಗಿ ಸರ್ಕಾರಕ್ಕೆ ಬೃಹತ್ ಪ್ರಮಾಣದ ಆರ್ಥಿಕ ನಷ್ಟ ಉಂಟಾಗಲು ಕಾರಣರಾಗಿ ಗಂಭೀರ ಸ್ವರೂಪದ ದುರ್ನಡತೆ ಎಸಗಿರುವುದು ದಾಖಲೆಗಳಿಂದ ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ, ಸದರಿ ದುರ್ನಡತೆಗೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆಯನ್ನು ಬಾಕಿಯಿಟ್ಟು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 10 (1) (ಡಿ) ರನ್ವಯ ತಕ್ಷಣದಿಂದ ಜಾರಿಗೆ ಬರುವಂತೆ ಸೇವೆಯಿಂದ ಅಮಾನತ್ತುಪಡಿಸಿದೆ:-

1. ಶ್ರೀ ಅಮರನಾಥ ಧೂಳೆ, ಅಂದಿನ ಸಹಾಯಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗ, ಅಫಜಲಪೂರ (ಹಾಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕಲಬುರಗಿ)
2. ಶ್ರೀ ಖಾಜಾನಿಜಾಮೊದ್ದೀನ್, ಕಿರಿಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗ, ಅಫಜಲಪೂರ

ಶ್ರೀ ಅಮರನಾಥ ಧೂಳೆ, ಸಹಾಯಕ ಇಂಜಿನಿಯರ್ ಹಾಗೂ ಶ್ರೀ ಖಾಜಾನಿಜಾಮೊದ್ದೀನ್, ಕಿರಿಯ ಇಂಜಿನಿಯರ್ ಇವರುಗಳ ಹುದ್ದೆಯ ಸ್ಥಾನ (ಲೀನ್) ವನ್ನು ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರು ರವರ ಕಚೇರಿಗೆ ವರ್ಗಾಯಿಸಿದೆ.

ಇವರುಗಳು ಅಮಾನತ್ತು ಅವಧಿಯಲ್ಲಿ ನಿಯಮಾನುಸಾರ ಜೀವನಾಧಾರ ಭತ್ಯೆ ಪಡೆಯಲು ಅರ್ಹರಾಗಿರುತ್ತಾರೆ ಹಾಗೂ ಅಮಾನತ್ತಿನ ಅವಧಿಯಲ್ಲಿ ಸಕ್ಷಮ ಪ್ರಾಧಿಕಾರದ ಅನುಮತಿ ಇಲ್ಲದೆ ಅವರು ಕೇಂದ್ರ ಸ್ಥಾನ ಬಿಡತಕ್ಕದಲ್ಲ.

ಪ್ರಕರಣದಲ್ಲಿ ಭಾಗಿಯಾಗಿರುವ ಶ್ರೀ ಮಹಾದೇವ ಶಿಂಧೆ, ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗ, ಅಫಜಲಪೂರ ಹಾಲಿ ಲೋಕೋಪಯೋಗಿ ಇಲಾಖೆಯಲ್ಲಿ ಇವರನ್ನು ಕೂಡಲೇ ಸೇವೆಯಿಂದ ಅಮಾನತ್ತುಪಡಿಸುವಂತೆ ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಗೆ ತಿಳಿಸಿದೆ.

ಪ್ರಕರಣದಲ್ಲಿ ಭಾಗಿಯಾಗಿರುವ ಗುತ್ತಿಗೆದಾರರು ಹಾಗೂ ಆಪಾದಿತ ಅಧಿಕಾರಿ / ನೌಕರರುಗಳ ವಿರುದ್ಧ ನ್ಯಾಯಾಲಯದಲ್ಲಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ , ಜಿಲ್ಲಾ ಪಂಚಾಯತ್, ಕಲಬುರಗಿ ಇವರಿಗೆ ತಿಳಿಸಿದೆ.

ಪ್ರಕರಣದಲ್ಲಿ ಭಾಗಿಯಾಗಿರುವ ಗುತ್ತಿಗೆದಾರರುಗಳಾದ ಶ್ರೀ ಸಿದ್ರಾಮ ಪಾಟೀಲ್, ಶ್ರೀ ದೇವಿಂದ್ರಪ್ಪ ಜಮಾದಾರ, ಶ್ರೀ ಶಿವಪ್ಪ ಡಿ. ಗಾಳನೂರು, ಶ್ರೀ ಮಹಾಂತಗೌಡ ಪಾಟೀಲ್, ಶ್ರೀ ಅಭಿಷೇಕ ಅರುಣಕುಮಾರ್ ಪಾಟೀಲ್, ಶ್ರೀ ಅಂಬರೇಶ ಎಂ. ಪಾಟೀಲ್, ಶ್ರೀ ನೂರಅಹ್ಮದ್ ಭಗವಾನ್ ಹಾಗೂ ಶ್ರೀ ಗುರುಶಾಂತ ಎಂ. ಸಾಲಿಮಠ ಇವರುಗಳ ಹೆಸರುಗಳನ್ನು ತಕ್ಷಣವೇ ಕಪ್ಪು ಪಟ್ಟಿಗೆ ಸೇರಿಸುವುದು ಹಾಗೂ ಈ ಗುತ್ತಿಗೆದಾರರು ಇಲಾಖೆಯಲ್ಲಿ ಪ್ರಸ್ತುತ ಅನುಷ್ಠಾನಗೊಳಿಸುತ್ತಿರುವ ಎಲ್ಲಾ ಕಾಮಗಾರಿಗಳನ್ನು ತನಿಖೆಗೆ ಒಳಪಡಿಸಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕಲಬುರಗಿ ಇವರಿಗೆ ತಿಳಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

08/03/2017
(ಎಸ್.ರಂಗನಗೌಡ),
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

1. ಮಹಾಲೇಖಪಾಲರು, (ಅ ಮತ್ತು ಇ) ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಕಲಬುರಗಿ.
4. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
5. ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಬೆಂಗಳೂರು
6. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ದಕ್ಷಿಣ), ಕೆ.ಆರ್.ಸರ್ಕಲ್, ಬೆಂಗಳೂರು.
7. ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕಲಬುರಗಿ.
8. ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕಲಬುರಗಿ.

9. ಶ್ರೀ ಅಮರನಾಥ ಧೂಳೆ, ಸಹಾಯಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕಲಬುರಗಿ.
10. ಶ್ರೀ ಖಾಜಾನಿಜಾಮೊದ್ದೀನ್, ಕಿರಿಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪ ವಿಭಾಗ, ಅಫಜಲಪೂರ.
11. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, (ಸೇವೆಗಳು-ಎ, ಬಿ & ಸಿ).
12. ಮಾನ್ಯ ಗ್ರಾ..ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ.
13. ಗ್ರಾ.ಅ.ಪಂ.ರಾಜ್ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ / ಜಂಟಿ ಕಾರ್ಯದರ್ಶಿ (ಆಡಳಿತ) ಇವರ ಆಪ್ತ ಕಾರ್ಯದರ್ಶಿ/ ಆಪ್ತ ಸಹಾಯಕರಿಗೆ.
14. ಮೇಲ್ವಿಚಾರಕರು, ಗಣಕಯಂತ್ರ ವಿಭಾಗ, ಗ್ರಾ.ಅ.ಪಂ.ರಾಜ್ ಇಲಾಖೆ ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಸಲುವಾಗಿ.
15. ಹೆಚ್ಚುವರಿ ಪ್ರತಿ:ರಕ್ಷಾ ಕಡತ : ಕಂಪ್ಯೂಟರ್ ಸೆಲ್.